ಇಗ್ಗಾಲಲ್ಲಿ ನಿಲ್ಲಬಯಸಿದರೆ ಬೆನ್ನು ತಟ್ಟಬೇಕು ಅನಿಸುತ್ತದೆ. ನನ್ನ ಮಗಳು, ಮಿಟ್ಟು ಫೋಟೊವನ್ನು ದೊಡ್ಡದು ಮಾಡಿಸಿ ಕೋಣೆಯಲ್ಲಿ ಹಾಕಿಕೊಂಡಳು. ಧಾರವಾಡಕ್ಕೆ ಓದಲೆಂದು ಹೋದವಳು, ಕಾಲೇಜು ಬಸ್‌ಸ್ಟಾಪಿನ ಬಳಿ ಸತ್ತುಬಿದ್ದಿದ್ದ ಕರಿಮರಿಯನ್ನು ನೋಡಿ, ಮಿಟ್ಟುವಿನ ನೆನಪಿನಲ್ಲಿ ಶ್ರದ್ಧಾಂಜಲಿ ಕವನ ಬರೆದಳು. ಹತ್ತುವರ್ಷಗಳ ಬಳಿಕ ಪ್ರೊ. ದತ್ತ, ದೆಹಲಿಯಿಂದ ಹಂಪಿಗೆ ಯಾತಕ್ಕೊ ಬಂದವರು, ತಮ್ಮ ಹೊಸ ಪುಸ್ತಕ ಕೈಲಿಟ್ಟರು. ಕರ್ನಾಟಕ ಸಂಸ್ಕೃತಿ ಮೇಲಿನ ಲೇಖನಗಳ ಸಂಕಲನವದು. ಅದರಲ್ಲಿ ಕರ್ನಾಟಕದ ಶ್ವಾನಶಾಸನ ಮತ್ತು ವೀರಗಲ್ಲುಗಳ ಮೇಲಿನ ಲೇಖನವೂ ಇತ್ತು. ಪುಟ ತೆಗೆಯುತ್ತ ಹೋದೆ. ಪುಸ್ತಕ ಬುರ್ರಿಗೆ ಅರ್ಪಣೆಯಾಗಿತ್ತು. ತನ್ನ ಒಣಗಿದ ಬಾಳಿಗೆ ಅರ್ಥಕೊಟ್ಟು ಕಣ್ಮರೆಯಾದ ಬುರ್ರಿಗೆ ಎಂದು ಒಕ್ಕಣೆಯಿತ್ತು! ಬಿಟ್ಟೇನೆಂದರೂ ಶ್ವಾನಮಾಯೆ ಬಿಡಲೊಲ್ಲದು. ಮನೆಕಟ್ಟಿ ನೋಡು ಮದುವೆ ಮಾಡಿ ನೋಡು ಎಂಬ ಸಿನಿಮಾ ಹಾಡಿದೆ. ಅದಕ್ಕೆ ನಾಯಿ ಸಾಕಿ ನೋಡು ಎಂಬ ಚರಣವನ್ನೂ ಸೇರಿಸಬಹುದೇನೊ?

ಮೊನ್ನೆ ಮುಸ್ಸಂಜೆ ವಾಕಿಂಗಿನಿಂದ ನಾನೂ ಬಾನು ಹಿಂತಿರುಗುತ್ತಿದ್ದೆವು. ಹಾದಿಬದಿಯ ಪೊದೆಯಲ್ಲಿ ಎಳೆಮರಿಯೊಂದು ಥಂಡಿ ತಡೆಯದೆ ಥರಥರಿಸುತ್ತಿತ್ತು. ಯಾರೊ ಆಗತಾನೆ ಅದನ್ನು ಬಿಟ್ಟುಹೋಗಿದ್ದು, ಅದನ್ನು ಹಾಕಿಕೊಂಡು ಬಂದಿದ್ದ ಪ್ಲಾಸ್ಟಿಕ್ ಕವರು ಕೂಡ ಅಲ್ಲೇ ಬಿದ್ದಿತ್ತು. ಸ್ವಲ್ಪಹೊತ್ತು ಹಾಗೇ ಇದ್ದರೆ ಅದು ಸಾಯುತ್ತಿತ್ತು. ಬಾನು ಎತ್ತಿಕೊಂಡಳು. ಹೆಣ್ಣುಕುನ್ನಿ. ಮುಖದಲ್ಲಿ ಆರ್ತ ಮುಗ್ಧತೆ. ನಾನು 'ಪ್ಲೀಸ್, ಅದನ್ನ ಅಲ್ಲೇ ಬಿಟ್ಟುಬಿಡು. ಅವುಗಳ ಸಹವಾಸ ಸಾಕು' ಎಂದು ಕೂಗಿದೆ. ಅವಳು ಕೇಳಿಸದವಳಂತೆ ಅದನ್ನು ಪ್ಲಾಸ್ಟಿಕ್ ಕವರಿನಲ್ಲಿ ಹಾಕಿಕೊಂಡು ಕಾಮಗಾರಿ ನಡೆಯುತ್ತಿದ್ದ ಒಂದು ಕಟ್ಟಡಕ್ಕೆ ತಂದುಬಿಟ್ಟಳು. ಕೊಂಚ ಹೊತ್ತಿನ ಬಳಿಕ ಬಾಟಲಿಯಲ್ಲಿ ಹಾಲನ್ನೂ ತೆಂಗಿನ ಕರಟವನ್ನೂ ತೆಗೆದುಕೊಂಡು ಹೋದಳು. ಅಷ್ಟರಲ್ಲಿ ಕಟ್ಟಡದ ಕೆಲಸಗಾರರು ಮತ್ತು ಅವನ ಮಕ್ಕಳು ಸೇರಿಕೊಂಡು ಅದಕ್ಕೆ ಉಪಚಾರ ಸುರುಮಾಡಿದ್ದರಂತೆ. 'ನೀವೇನು ಬಿಟ್ಟುಹೋದವರು?' ಎಂದು ಕೇಳಬಹುದು ಎಂದಾಕೆ ಅಂಜಿದ್ದಳು. ಆದರೆ ಮಕ್ಕಳು 'ಆಂಟಿ ಇದು ನಿಮ್ದಾ? ನಮಗಿರಲಿ' ಎಂದರಂತೆ. ಬಂದವಳೇ 'ಮರಿ ಬದುಕಿದೆ ಕಣೋ' ಎಂದಳು. ಅವಳ ಕಣ್ಣಲ್ಲಿದ್ದ ಭಾವನೆ ಅರಿಯಲೆತ್ನಿಸಿದೆ. ಅರ್ಥವಾಗದಷ್ಟು ಆಳವಾಗಿತ್ತು. ಅದರಲ್ಲಿ ನನ್ನ ಕ್ಷುದ್ರತೆಯ ಬಿಂಬವೂ ಕಂಡಿತು.

## ರಹಮತ್ ತರೀಕೆರೆ

ಕನ್ನಡದ ಸಂಸ್ಕೃತಿ ಚಿಂತನೆಯಲ್ಲಿ ರಹಮತ್ ಅವರದು ಪ್ರಮುಖ ಹೆಸರು. ಅವರು ಚಿಕ್ಕಮಗಳೂರು ಜಿಲ್ಲೆಯ ತರೀಕೆರೆಯವರು. ನಾಡು ಸುತ್ತುವ ದಾಹ, ಮೋಹ ಇರುವ ಅವರ ಪ್ರಕಟಿತ ಪ್ರಮುಖ ಪುಸ್ತಕಗಳು: 'ಪ್ರತಿಸಂಸ್ಕೃತಿ', 'ಮರದೊಳಗಣ ಕಿಚ್ಚು', 'ಅಮೀರ್‌ಬಾಯಿ ಕರ್ನಾಟಕಿ', 'ನಡೆದಷ್ಟೂ ನಾಡು', 'ಕರ್ನಾಟಕದ ನಾಥ ಪಂಥ', 'ಕರ್ನಾಟಕದ ಸೂಫಿಗಳು' 'ಅಂಡಮಾನ್ ಕನಸು', 'ಕತ್ತಿಯಂಚಿನ ದಾರಿ', 'ಲೋಕವಿರೋಧಿಗಳ ಜೊತೆಯಲ್ಲಿ'. ರಹಮತ್, ಹಂಪಿಯ ಕನ್ನಡ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರು. ಲೇಖಕರು ಈ ಹಿಂದೆ ಪ್ರಕಟವಾಗಿದ್ದ ಟಿಪ್ಪಣಿರೂಪವನ್ನು ಬೆಳೆಸಿ, ಸುಲಲಿತ ಪ್ರಬಂಧವಾಗಿ ಮರುಸೃಷ್ಟಿ ಮಾಡಿದ್ದಾರೆ.